**ಮಾನ್ಯ ವಿಧಾನ ಪರಿಷತ್ ಸದಸದ್ಯರಾದ ಶ್ರೀ ಬಿ.ಎಂ. ಫಾರೂಖ್, ಶ್ರೀ ಟಿ.ಎ. ಶರವಣ, ಶ್ರೀ ಕೆ.ಎ. ತಿಪ್ಪೇಸ್ವಾಮಿ ಹಾಗೂ ಶ್ರೀ ಗೋವಿಂದರಾಜು ಇವರುಗಳು ನಿಯಮ-330 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಉತ್ತರ**

-: ವಿಷಯ :-

ದಕ್ಷಿಣ ಕನ್ನಡ ಜಿಲ್ಲೆ, ಮುಡಿಪು ಮತ್ತು ಇನ್ನಿತರ ಗ್ರಾಮಗಳಲ್ಲಿ ಕೆನರಾ ಪ್ರದೇಶದ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಲು ರೈತರಿಂದ 700ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಭೂಸ್ವಾಧೀನ ಮಾಡಿಕೊಂಡು 20 ವರ್ಷ ಕಳೆದಿದೆ. ಆದರೆ, ಈ ಕೈಗಾರಿಕಾ ಪ್ರದೇಶದಲ್ಲಿ ಪೂರ್ಣ ಪ್ರಮಾಣದ ಅಭಿವೃದ್ಧಿ ಮಾಡದೇ ಕೈಗಾರಿಕೆ ಘಟಕಗಳ ಸ್ಥಾಪನೆಗೆ ಹಂಚಿಕೆ ಮಾಡದೆ ಮತ್ತು ಸುತ್ತ-ಮುತ್ತಲಿನ ಗ್ರಾಮಗಳಿಗೆ ಸಂಪರ್ಕ ರಸ್ತೆ ಕಲ್ಪಿಸದೆ, ಸರ್ವೆ ನಂ.201 ಹಾಗೂ ಇನ್ನಿತರ ಜಮೀನುಗಳಿಗೆ, ಸಂಚರಿಸುವ ಗ್ರಾಮಸ್ಥರಿಗೆ ತೊಂದರೆಯಾಗದೆ. ಈ ರಸ್ತೆ ಕಲ್ಪಿಸಲು ಈಗಾಗಲೇ 2 ವರ್ಷಗಳಿಂದ 35 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಟೆಂಡರ್ ಕರೆದು, ಗುತ್ತಿಗೆದಾರರನ್ನು ನೇಮಿಸಿದ್ದರೂ, ಇದುವರೆಗೂ ಕಾಮಗಾರಿ ಪ್ರಾರಂಭವಾಗಿಲ್ಲ. ಇದರಿಂದ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೊಳ್ಳದೇ ಮತ್ತು ಇತರೆ ಮೂಲ ಸೌಕರ್ಯಗಳನ್ನು ಕಲ್ಪಿಸದೆ ಇರುವುದು ಶೋಚನೀಯ ಸಂಗತಿ. ಜೊತೆಯಲ್ಲಿ ಸುತ್ತ-ಮುತ್ತಲಿನ ರೈತರಿಗೆ ತಮ್ಮ ಜಮೀನು ಮತ್ತು ತೋಟಗಳಿಗೆ ದಿನನಿತ್ಯ ಹೋಗಿ ಬರಲು ಅನಾನುಕೂಲವಾಗಿರುತ್ತದೆ. ಇದಲ್ಲದೆ, ಭೂಸ್ವಾಧೀನ ಮಾಡಿಕೊಂಡ ಪ್ರದೇಶದ ಸುಮಾರು ಶೇಕಡ 70 ರಷ್ಟು ಇಳಿಜಾರು ಪ್ರದೇಶವಾಗಿದ್ದು, ಈ ಭೂಮಿಯು ಕೈಗಾರಿಕಾ ಅಭಿವೃದ್ಧಿಗೆ ಉಪಯುಕ್ತ ಮತ್ತು ಯೋಗ್ಯವಲ್ಲವೆಂದು ಸರ್ಕಾರಕ್ಕೆ ತಿಳಿದಿದ್ದರೂ, ಇಂತಹ ಪ್ರದೇಶವನ್ನು ಯಾವ ಅನುಕೂಲಕ್ಕೆ ಮತ್ತು ಯಾರ ಒತ್ತಾಯಕ್ಕೆ ಸ್ವಾಧೀನ ಮಾಡಿಕೊಳ್ಳಲಾಗಿದೆ ಎಂಬುದು ತಿಳಿಯದು. ಈ ಬಗ್ಗೆ ಸದನದಲ್ಲಿ ಕೂಲಂಕುಶವಾಗಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಲು ಈ ಸಾರ್ವಜನಿಕ ಮಹತ್ವದ ವಿಷಯವನ್ನು ನಿಯಮ 330ರ ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

-: ಉತ್ತರ :-

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕೆನರಾ 1ನೇ ಹಂತ ಕೈಗಾರಿಕಾ ಪ್ರದೇಶಕ್ಕಾಗಿ ಈ ಕೆಳಕಂಡ ಗ್ರಾಮಗಳ ಒಟ್ಟು 585.66 ಎಕರೆ ಜಮೀನನ್ನು ದಿನಾಂಕ: 12.08.2009ರಂದು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ:-

| ಗ್ರಾಮ | ವಿಸ್ತೀರ್ಣ (ಎ-ಸೆಂ) | |
|---|---|---|
| | ಖಾಸಗಿ | ಸರ್ಕಾರಿ |
| ಕುರ್ನಾಡು | 111.46 | 43.58 |
| ಬೇಳೂರು | 84.82 | 47.05 |
| ಬಾಳೆಪುಣಿ | 18.63 | 0.66 |
| ಇರಾ | 194.62 | 84.84 |
| ಒಟ್ಟು | 409.53 | 176.13 |

ಕೆನರಾ 2ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ ಈ ಕೆಳಕಂಡ ಗ್ರಾಮಗಳ ಒಟ್ಟು 125.00 ಎಕರೆ ಜಮೀನನ್ನು ದಿನಾಂಕ 12.02.2013 ರಂದು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ:-

| ಗ್ರಾಮ | ವಿಸ್ತೀರ್ಣ (ಎ-ಸೆಂ) | |
|---|---|---|
| | ಖಾಸಗಿ | ಸರ್ಕಾರಿ |
| ಕುರ್ನಾಡು | 49.65 | 3.28 |
| ಬಾಳೆಪುಣಿ | 32.89 | 39.18 |
| ಒಟ್ಟು | 82.54 | 42.46 |

ಕೆನರಾ 1ನೇ ಹಂತದ ಕೈಗಾರಿಕಾ ಪ್ರದೇಶದ ಒಟ್ಟು 585.66 ಎಕರೆ ವಿಸ್ತೀರ್ಣದ ಪೈಕಿ ಈಗಾಗಲೇ 113.90 ಎಕರೆ ಜಮೀನನ್ನು ಜಿಲ್ಲಾ ಕೇಂದ್ರ ಕಾರಾಗೃಹ ಮತ್ತು ಕರ್ನಾಟಕ ರಾಜ್ಯ ಮೀಸಲು ಪೋಲಿಸ್ ಇಲಾಖೆಗೆ ಹಂಚಿಕೆ ಮಾಡಲಾಗಿದೆ. ಸುಮಾರು 100 ಎಕರೆ ಜಮೀನು ಭಾಗಶ: ಸಮತಟ್ಟಾಗಿರುತ್ತದೆ ಹಾಗೂ ಸುಮಾರು 316 ಎಕರೆ ಜಮೀನು ಮೇಲ್ನೋಟಕ್ಕೆ ಗುಡ್ಡ ಮತ್ತು ಇಳಿಜಾರು ಪ್ರದೇಶವಾಗಿ ಕಂಡು ಬರುತ್ತದೆ. ಈ ಕೈಗಾರಿಕಾ ಪ್ರದೇಶದಲ್ಲಿ ಮುಖ್ಯ ರಸ್ತೆಯನ್ನು ನಿರ್ಮಿಸಲಾಗಿದ್ದು, ಚರಂಡಿ, ಬೀದಿ ದೀಪ, ಸೌಕರ್ಯ ಒದಗಿಸಲಾಗಿದೆ.

ಮುಂದುವರೆದು ಕೆನರಾ 1ನೇ ಹಂತದ ಕೈಗಾರಿಕಾ ಪ್ರದೇಶಕ್ಕೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ (MoEF) ಪರಿಸರ ವಿಮೋಚನಾ ಪತ್ರ ಪಡೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ನಿರಾಕ್ಷೇಪಣೆ ಪತ್ರ ಪಡೆದ ಬಳಿಕ ಉಪ ಬಡಾವಣೆ ಅಭಿವೃದ್ಧಿಪಡಿಸಿ ಮೂಲಭೂತ ಸೌಕರ್ಯ ಕಲ್ಪಿಸಿದ ನಂತರ ನಿವೇಶನ ಹಂಚಿಕೆ ಮಾಡಲಾಗುತ್ತದೆ.

ಕೆನರಾ 2ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿದ ಬಾಳೇಪುಣಿ ಮತ್ತು ಕುರ್ನಾಡು ಗ್ರಾಮಗಳ ಒಟ್ಟು 125-29 ಎಕರೆ ಜಮೀನು ಗುಡ್ಡ ಮತ್ತು ಇಳಿಜಾರು ಪ್ರದೇಶದಿಂದ ಕೂಡಿರುತ್ತದೆ.

ಕೆನರಾ ಕೈಗಾರಿಕಾ ಪ್ರದೇಶಕ್ಕೆ ಕೋಟೆಕಾರ್-ಪಾತೂರು ಲೋಕೋಪಯೋಗಿ ರಸ್ತೆಯಿಂದ ಸಂಪರ್ಕ ಕಲ್ಪಿಸುವ 1.40 ಕಿ.ಮೀ. ಉದ್ದದ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರಲ್ಲಿ ಈಗಾಗಲೇ 1.20 ಕಿ.ಮೀ. ಉದ್ದದ ರಸ್ತೆಯ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ 200 ಮೀಟರ್ ರಸ್ತೆಯ ಕಾಮಗಾರಿಯು ಸ್ಥಳೀಯ ಜಾಗದ ಸಮಸ್ಯೆ, ಕೋವಿಡ್ 19ರ ಕಾರಣದಿಂದಾಗಿ ಕಾರ್ಮಿಕರ ಸಮಸ್ಯೆ ಇತ್ಯಾದಿಗಳಿಂದ ವಿಳಂಬಗೊಂಡಿದ್ದು, ಪ್ರಸ್ತುತ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದು, ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.

ಸಂಖ್ಯೆ: ಸಿಐ 53 ಐಎಪಿ (ಇ) 2023

(ಡಾ. ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು